**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು**

**ಸೆಷನ್ಸ್ ಕೇಸ್ ನಂಬ್ರ 34/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಕೆ.ಸುಕುಮಾರ್** | ಪ್ರಾ.ಸಾಃ 45 |
| ತಂದೆಯ ಹೆಸರು | : | ಕೆ.ಕುಟ್ಟನ್ ನಾಯರ್ | ಚಾ.ಸಾಃ 58 |
| ಪ್ರಾಯ | : | 65 ವರ್ಷ | ದಿನಾಂಕಃ 04.04.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. | |
| ವಾಸಸ್ಥಳ | | ಬೆಂಗಳೂರು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 1998 ರಿಂದ ಜುಲೈ-2020ರವರೆಗೆ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ ರಾಜ್ಯ ಗುಪ್ತ ವಾರ್ತೆ ಬೆಂಗಳೂರಿನಲ್ಲಿ ಪ್ರಭಾರಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನನಗೆ 1999 ರಲ್ಲಿ ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್ ಹರ್ಯಾಣದಲ್ಲಿ ಮತ್ತು 2000 ರಲ್ಲಿ ಬಿಎಸಎಫ್ ಹಜಾರಿಭಾದ್ ನಲ್ಲಿ 2006 ರಲ್ಲಿ ಎಂಇಜಿ, ಚೆನ್ನೈ ಯಲ್ಲಿ ತರಬೇತಿಯನ್ನು ಸ್ಫೋಟಕ ಪತ್ತೆ ಮತ್ತು ನಿಷ್ಕ್ರಿಯ ಮಾಾಡುವುದಲ್ಲಿ ನೀಡಲಾಗಿರುತ್ತದೆ. ನನಗೆ ಸ್ಫೋಟಕ ಪತ್ತೆ ಮತ್ತು ನಿಷ್ಕ್ರಿಯ ಕರ್ತವ್ಯದ ಸೇವೆಗಾಗಿ 2001 ರಲ್ಲಿ ಮಾನ್ಯ ಮುಖ್ಯ ಮಂತ್ರಿ ಪದಕ ಮತ್ತು 2005ರಲ್ಲಿ ರಾಷ್ಟ್ರಪತಿಯ ಪದಕ ಬಂದಿರುತ್ತದೆ. ಬೆಂಗಳೂರಿನ ಕೋರಮಂಗಲ ಥಾರಂನಲ್ಲಿ ಬಾಂಬೆ ನಿಷ್ಕ್ರಿಯಗೊಳಿಸಿದ್ದಕ್ಕಾಗಿ 2008ರಲ್ಲಿ ಮುಖ್ಯಮಂತ್ರಿಯವರಿಂದ ರೂ.100000 ನಗದು ಪುರಸ್ಕಾರ ದೊರಕಿರುತ್ತದೆ.

2. ಈ ಪ್ರಕರಣದಲ್ಲಿ ದಿನಾಂಕಃ 03.10.2008 ರಂದು ಉಳ್ಳಾಲ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ವಶಪಡಿಸಿಕೊಂಡಿರುವ 5 ಸಂಖ್ಯೆಯ ಬಾಂಬುಗಳನ್ನು ನಿಷ್ಕ್ರಿಯಗೂಳಿಸಲು ಡಿ.ಐ.ಜಿ.ಪಿ (ಭದ್ರತೆ)ರಾಜ್ಯ ಗುಪ್ತವಾರ್ತೆ ರವರು ಮೌಖಿಕ ಆದೇಶವನ್ನು ನೀಡಿದ್ದು ಈ ಆದೇಶದಂತೆ ರಾಜ್ಯ ಗುಪ್ತವಾರ್ತೆಯ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದಿಂದ ನನ್ನ ನೇತೃತ್ವದಲ್ಲಿ ಆರ್.ಶಶಿಕುಮಾರ ಪಿ.ಸಿ, ಜಿ.ವಿ.

ವೆಂಕಟೇಶ್ ಪಿ.ಸಿ ಮತ್ತು ಹೂವಯ್ಯ ಮೌಲ್ಯ ಹೆಚ್.ಸಿ (ಚಾಲಕ) ಅವರನ್ನೊಳಗೊಂಡ ತಂಡವು ದಿನಾಂಕಃ 03.10.2008 ಮಧ್ಯಾಹ್ನ 13.00 ಗಂಟೆಗೆ ಬೆಂಗಳೂರನ್ನು ಬಿಟ್ಟು ರಾತ್ರಿ ಸುಮಾರು 22.00 ಗಂಟೆಗೆ ಮಂಗಳೂರು ನಗರಕ್ಕೆ ತಲುಪಿರುತ್ತೇವೆ.

3. ಮಾರನೇ ದಿನ ಅಂದರೆ ದಿನಾಂಕಃ 04.10.2008 ರಂದು ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಹಾಜರಿದ್ದ ಪೊಲೀಸ್ ಇನ್ಸ್ ಪೆಕ್ಟರ್, ಡಿ.ಸಿ.ಐ.ಬಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರುರವರು ಉಲ್ಲೇಖ ಪತ್ರವನ್ನು ನೀಡಿ ವಶಪಡಿಸಿಕೊಂಡಿದ್ದ 5 ಬಾಂಬ್ ಗಳನ್ನು ತೋರಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಅದರಂತೆ ಮಧ್ಯಾಹ್ನ 12.30 ಗಂಟೆಗೆ ಸದರಿ 5 ಜೀವಂತ ಬಾಂಬ್ ಗಳನ್ನು ಸುಮಾರು 7-8 ಕಿ.ಮೀ. ದೂರದಲ್ಲಿದ್ದ ಬೆಂಗರೆ ಎಂಬ ದ್ವೀಪದ ಮಧ್ಯೆ ನಿರ್ಜನ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಸ್ಪೋಟಕ ಪತ್ತೆ ಹಚ್ಚುವ ಉಪಕರಣಗಳಿಂದ ಕೂಲಂಕುಷವಾಗಿ ಪರಿಶೀಲಿಸಲಾಗಿ ಸ್ಪೋಟಕವೆಂಬ ಸೂಚನೆಯನ್ನು ಸ್ಪೋಟಕ ಪತ್ತೆ ಹಚ್ಚುವ ಸಾಧನವು ನೀಡಿರುತ್ತದೆ ಹಾಗೂ ಇತರೇ ಉಪಕರಣಗಳಾದ ಹೆಚ್.ಹೆಚ್.ಎಂ.ಡಿ ಯಿಂದ ಪರೀಕ್ಷಿಸಲಾಗಿ ಲೋಹದ ಅಂಶ ಇರುವುದನ್ನು ಸೂಚಿಸಿರುತ್ತದೆ ಮತ್ತು ಹೊರನೋಟಕ್ಕೆ ಸೇಫ್ಟಿ ಫ್ಯೂಸ್ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಬಾಂಬ್ ಗಳು ಜೀವಂತವಾಗಿದ್ದವೆಂದು ದೃಡೀಕರಿಸಲಾಯಿತು. ಮೇಲ್ನೋಟಕ್ಕೆ ಸದರಿ 5 ಜೀವಂತ ಬಾಂಬ್ ಗಳಲ್ಲಿ 2 ಸಂಖ್ಯೆ ಯವು ಒಂದೇ ಆಕಾರದಲ್ಲಿದ್ದು ಕಪ್ಪು ಬಣ್ಣದ ಇನ್ಸುಲೇಷನ್ ಟೇಪಿನಿಂದ ಸುತ್ತಲಾಗಿತ್ತು ಮತ್ತು ಪ್ರತಿಯೊಂದರ ಉದ್ದಃ ಸುಮಾರು 5.7 ಇಂಚುಗಳು, ಸುತ್ತಳತೆಃ ಸುಮಾರು 4.5 ಇಂಚುಗಳು, ವ್ಯಾಸಃ 1.5 ಇಂಚುಗಳು ಮತ್ತೂ ತೂಕಃ ಸುಮಾರು 350 ಗ್ರಾಂಗಳಷ್ಟಿದ್ದವು.

4. ಉಳಿದ 3 ಬಾಂಬ್ ಗಳು ಒಂದೇ ಆಕಾರದಲ್ಲಿದ್ದು 2 ಬಾಂಬ್ ಗಳು ಕಪ್ಪು ಬಣ್ಣದ ಇನ್ಸುಲೇಷನ್ ಟೇಪಿನಿಂದ ಸುತ್ತಲಾಗಿತ್ತು ಮತ್ತು ಒಂದನ್ನು ಹಳದಿ ಬಣ್ಣದ ಇನ್ಸುಲೇಷನ್ ಟೇಪಿನಿಂದ ಸುತ್ತಲಾಗಿತ್ತು. ಇವು ಪ್ರತಿಯೊಂದರ

ಉದ್ದ:ಸುಮಾರು 5.7 ಇಂಚುಗಳು, ಸುತ್ತಳತೆ: ಸುಮಾರು 4 ಇಂಚುಗಳು, ವ್ಯಾಸ: 1 ಇಂಚುಗಳು ಮತ್ತು ತೂಕ: ಸುಮಾರು 150 ಗ್ರಾಂಗಳಷ್ಟಿದ್ದವು. ಸುಮಾರು 350 ಗ್ರಾಂ ತೂಕವಿದ್ದ 2 ಬಾಂಬ್ ಗಳನ್ನು ನಿಷ್ಕ್ರಿಯ ಮಾಡಿದ ನಂತರ ಕೆಳಗಿನಂತೆ ಕೆಲವು ವಸ್ತುಗಳು ದೊರಕಿರುತ್ತವೆ.

**1 ನೇ ಬಾಂಬ್ ನಲ್ಲಿ ದೊರೆತ ವಸ್ತುಗಳು:**

a: ಕಪ್ಪು ಬಣ್ಣದ ಇನ್ಸುಲೇಷನ್ ಟೇಪ್ ಸುಮಾರು 20 ಗ್ರಾಂ

b: ತಿಳಿ ಹಳದಿ ಬಣ್ಣದ ನೈಲಾನ್ ದಾರ ಸುಮಾರು 150 ಇಂಚುಗಳು

c: 3 ಇಂಚು ಉದ್ದವುಳ್ಳ ಕಬ್ಬಿಣದ ಮೊಳೆಗಳು 22 ಸಂಖ್ಯೆ

d: ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 3.8 ಇಂಚು ಉದ್ದ ಸುತ್ತಳತೆ 3.2 ಇಂಚಿನ ಪೈಪ್ 1 ಸಂಖ್ಯೆ

e: ಹಸಿರು ಬಣ್ಣದ ರಸಾಯನಿಕ ಬಣ್ಣದ ವಸ್ತುವಿನಿಂದ ಪೈಪಿನ ಎರಡೂ ತುದಿಗಳಲ್ಲಿ ಮುಚ್ಚಿದ ಭಾಗಗಳು 2 ಸಂಖ್ಯೆ

f: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 1 ಸಂಖ್ಯೆ

g:ನಾನ್ ಎಲೆಕ್ಟ್ರಿಕ್ ಡೆಟೋನೇಟರ್ 1 ಸಂಖ್ಯೆ

h: ಸ್ಫೋಟಕ: ಅಂದಾಜು 60 ಗ್ರಾಂ

**2 ನೇ ಬಾಂಬ್ ನಲ್ಲಿ ದೊರೆತ ವಸ್ತುಗಳು:**

a: ಕಪ್ಪು ಬಣ್ಣದ ಇನ್ಸುಲೇಷನ್ ಟೇಪ್ ಸುಮಾರು 20 ಗ್ರಾಂ

b: ತಿಳಿ ಹಳದಿ ಬಣ್ಣದ ನೈಲಾನ್ ದಾರ ಸುಮಾರು 150 ಇಂಚುಗಳು

c: 3 ಇಂಚು ಉದ್ದವುಳ್ಳ ಕಬ್ಬಿಣದ ಮೊಳೆಗಳು 22 ಸಂಖ್ಯೆ

d: ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 3.8 ಇಂಚು ಉದ್ದ ಸುತ್ತಳತೆ 3.2 ಇಂಚಿನ ಪೈಪ್ 1 ಸಂಖ್ಯೆ

e: ಹಸಿರು ಬಣ್ಣದ ರಸಾಯನಿಕ ಬಣ್ಣದ ವಸ್ತುವಿನಿಂದ ಪೈಪಿನ ಎರಡೂ ತುದಿಗಳಲ್ಲಿ ಮುಚ್ಚಿ ದ ಭಾಗಗಳು 2 ಸಂಖ್ಯೆ

f: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 1 ಸಂಖ್ಯೆ

g:ನಾನ್ ಎಲೆಕ್ಟ್ರಿಕ್ ಡೆಟೋನೇಟರ್ 1 ಸಂಖ್ಯೆ

h: ಸ್ಫೋಟಕಃ ಅಂದಾಜು 60 ಗ್ರಾಂ

ಸುಮಾರು 150 ಗ್ರಾಂ ತೂಕವಿದ್ದ 3 ಬಾಂಬ್ ಗಳನ್ನು ನಿಷ್ಕ್ರಿಯ ಮಾಡಿದ ನಂತರ ಈ ಕೆಳಗಿನ ವಸ್ತುಗಳು ದೊರಕಿರುತ್ತದೆ.

**3 ಮತ್ತು 4ನೇ ಬಾಂಬ್ ನಲ್ಲಿ ದೊರೆತ ವಸ್ತುಗಳುಃ**

a: ಕಪ್ಪು ಬಣ್ಣದ ಇನ್ಸುಲೇಷನ್ ಟೇಪ್ ಸುಮಾರು 20 ಗ್ರಾಂ

b: ತಿಳಿ ಹಳದಿ ಬಣ್ಣದ ನೈಲಾನ್ ದಾರ ಸುಮಾರು 140 ಇಂಚುಗಳು

c: ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 3.8 ಇಂಚು ಉದ್ದ ಸುತ್ತಳತೆ 3.2 ಇಂಚಿನ ಪೈಪ್ 1 ಸಂಖ್ಯೆ

d: ಹಸಿರು ಬಣ್ಣದ ರಾಸಾಯನಿಕ ಬಣ್ಣದ ವಸ್ತುವಿನಿಂದ ಪೈಪಿನ ಎರಡೂ ತುದಿಗಳಲ್ಲಿ ಮುಚ್ಚಿದ ಭಾಗಗಳು 2 ಸಂಖ್ಯೆ

e: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 1 ಸಂಖ್ಯೆ

f:ನಾನ್ ಎಲೆಕ್ಟ್ರಿಕ್ ಡೆಟೋನೇಟರ್ 1 ಸಂಖ್ಯೆ

g: ಸ್ಫೋಟಕಃ ಅಂದಾಜು 60 ಗ್ರಾಂ

**5 ನೇ ಬಾಂಬ್ ನಲ್ಲಿ ದೊರೆತ ವಸ್ತುಗಳುಃ**

a: ಕಪ್ಪು ಬಣ್ಣದ ಇನ್ಸುಲೇಷನ್ ಟೇಪ್ ಸುಮಾರು 20 ಗ್ರಾಂ

b: ತಿಳಿ ಹಳದಿ ಬಣ್ಣದ ನೈಲಾನ್ ದಾರ ಸುಮಾರು 160 ಇಂಚುಗಳು

c: ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 3.8 ಇಂಚು ಉದ್ದ ಸುತ್ತಳತೆ 3.2 ಇಂಚಿನ ಪೈಪ್ 1 ಸಂಖ್ಯೆ

d: ಹಸಿರು ಬಣ್ಣದ ರಾಸಾಯನಿಕ ಬಣ್ಣದ ವಸ್ತುವಿನಿಂದ ಪೈಪಿನ ಎರಡೂ ತುದಿಗಳಲ್ಲಿ ಮುಚ್ಚಿ ದ ಭಾಗಗಳು 2 ಸಂಖ್ಯೆ

e: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 1 ಸಂಖ್ಯೆ

f:ನಾನ್ ಎಲೆಕ್ಟ್ರಿಕ್ ಡೆಟೋನೇಟರ್ 1 ಸಂಖ್ಯೆ

g: ಸ್ಫೋಟಕಃ ಅಂದಾಜು 60 ಗ್ರಾಂನಷ್ಟಿದ್ದು ಸ್ಫೋಟಕ ಸುತ್ತಿದ್ದ ಪೇಪರಿನಲ್ಲಿ ಮುದ್ರಿಸಲಾಗಿದ್ದ ಅಕ್ಷರಗಳು ಈ ಕಳಗಿನಂತಿದ್ದವುಃ-

RAJ GEL 90 Manufactured by: Rajastan
Explosive and chemicals Ltd., Near
MACHKUND, KHOLPUR-328001, Rajastan
India.Fax: 407100221518 Ph: 100,221910
Quality, Safety, Dependablity Explosive class-II
25mm x 125 gm. An ISO 9001:2000 certified.

ಮೇಲ್ಕಂಡ 350 ಗ್ರಾಂ ತೂಕವಿದ್ದ 2 ಬಾಂಬ್ ಗಳನ್ನು ನಿಷ್ಕ್ರಿಯಗೊಳಿಸಿದ ನಂತರ ದೊರೆತ ವಸ್ತುಗಳನ್ನು ಈ ಕೆಳಕಂಡಂತೆ ಕೆಂಪು ಬಣ್ಣದ ಮುಚ್ಚಳವಿರುವ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಲಾಗಿರುತ್ತದೆ.

a. ಪ್ಲಾಸ್ಟಿಕ್ ಡಬ್ಬ A1: ಸುಮಾರು 20 ಗ್ರಾಂ ತೂಕವುಳ್ಳ ಕಪ್ಪು ಬಣ್ಣದ ಇನ್ಸುಲೇಷನ್ ಟೇಪ್

b. ಪ್ಲಾಸ್ಟಿಕ್ ಡಬ್ಬ A2: 2ತಿಳಿ ಹಳದಿ ಬಣ್ಣದ ನೈಲಾನ್ ದಾರ ಅಂದಾಜು 40 ಗ್ರಾಂ

c. ಪ್ಲಾಸ್ಟಿಕ್ ಡಬ್ಬ A3: ಇಂಚು ಉದ್ದವುಳ್ಳ 44 ಕಬ್ಬಿಣದ ಮೊಳೆಗಳು ಅಂದಾಜು 400 ಗ್ರಾಂ.

d. ಪ್ಲಾಸ್ಟಿಕ್ ಡಬ್ಬ A4 : ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 2 ಸಂಖ್ಯೆ ಮತ್ತು ಹಸಿರು ಬಣ್ಣದ ರಾಸಾಯನಿಕ ಬಣ್ಣದ ವಸ್ತುವಿನಿಂದ ಪೈಪಿನ ಎರಡೂ ತುದಿಗಳಲ್ಲಿ ಮುಚ್ಚಿ ದ ಭಾಗಗಳು 4 ಸಂಖ್ಯೆ ಅಂದಾಜು 100 ಗ್ರಾಂ.

e. ಪ್ಲಾಸ್ಟಿಕ್ ಡಬ್ಬ A5: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 2 ಮತ್ತು ನಾನ್ ಎಲ್ಕ್ಟ್ರಿಕ್ ಡೆಟೋನೇಟರ್ 2 ಒಟ್ಟು ಅಂದಾಜು 20 ಗ್ರಾಂ.

f. ಪ್ಲಾಸ್ಟಿಕ್ ಡಬ್ಬ A6: 2 ಸ್ಫೋಟಕ ಪದಾರ್ಥ ಅಂದಾಜು 120 ಗ್ರಾಂ.

ಮೇಲ್ಕಂಡ 150 ಗ್ರಾಂ ತೂಕವಿದ್ದ 3 ಬಾಂಬ್ ಗಳನ್ನು ನಿಷ್ಕ್ರಿಯಗೊಳಿಸಿದ ನಂತರ ದೊರೆತ ವಸ್ತುಗಳನ್ನು ಈ ಕೆಳಕಂಡ ಕ್ರಮಾಂಕದಂತೆ ಕೆಂಪು ಬಣ್ಣದ ಮುಚ್ಚಳವಿರುವ ಪ್ಲಾಸ್ಟಿಕ್ ಡಬ್ಬಗಳಲ್ಲಿ ಹಾಕಲಾಗಿರುತ್ತದೆ.

a. ಪ್ಲಾಸ್ಟಿಕ್ ಡಬ್ಬ B1: ಕಪ್ಪು ಬಣ್ಣದ 2 ಮತ್ತು 1 ಹಳದಿ ಬಣ್ಣದ ಇನ್ಸುಲೇಷನ್ ಟೇಪ್ ಅಂದಾಜು 30 ಗ್ರಾಂ.

b. ಪ್ಲಾಸ್ಟಿಕ್ ಡಬ್ಬB2: 3 ತಿಳಿ ಹಳದಿ ಬಣ್ಣದ ನೈಲಾನ್ ದಾರ ಅಂದಾಜು 60 ಗ್ರಾಂ

c. ಪ್ಲಾಸ್ಟಿಕ್ ಡಬ್ಬ B3: ನೀಲಿ ಬಣ್ಣದ ¾ ಇಂಚಿನ ಪಿ.ವಿ.ಸಿ ಪೈಪ್ 3 ಸಂಖ್ಯೆ ಅಂದಾಜು 150 ಗ್ರಾಂ.

d. ಪ್ಲಾಸ್ಟಿಕ್ ಡಬ್ಬ B4: ಸುಮಾರು 9 ಸೆಂ.ಮೀ ಉದ್ದವುಳ್ಳ ಸೇಫ್ಟಿ ಫ್ಯೂಸ್ 3 ಮತ್ತು ನಾನ್ ಎಲೆಕ್ಟ್ರಿಕ್ ಡೆಟೋನೇಟರ್ 3 ಒಟ್ಟು ಅಂದಾಜು 30 ಗ್ರಾಂ.

e. ಪ್ಲಾಸ್ಟಿಕ್ ಡಬ್ಬ B5: 3 ಸ್ಫೋಟಕ ಪದಾರ್ಥ ಅಂದಾಜು 180 ಗ್ರಾಂ. ಹಾಗೂ ಸ್ಫೋಟಕ ರಾಸಾಯನಿಕ ತಯಾರಿಸುವ ವಿಳಾಸ ಮುದ್ರಣವಾಗಿರುವ ಪೇಪರ್

ಮೇಲ್ಕಾಣಿಸಿದ ಸುಧಾರಿತ ಮಾದರಿ ಸ್ಫೋಟಕಕ್ಕೆ (Improvised Explosive Device – IED) ಸಂಬಂದಪಟ್ಟ ಕ್ರಮಾಂಕ 1 ರಿಂದ 5 ರವರೆಗಿನ ಎಲ್ಲಾ ವಸ್ತುಗಳನ್ನು ಕ್ರಮಾಂಕದಂತೆ ಕೆಂಪು ಮುಚ್ಚಳದ ಪ್ಲಾಸ್ಟಿಕ್ ಡಬ್ಬಗಳಿಗೆ ತುಂಬಿ ಮುಚ್ಚಳ ಹಾಕಿದ ಡಬ್ಬಗಳನ್ನು ದಿನಾಂಕಃ 04.10.2008 ರಂದು 19.00 ಗಂಟೆಗೆ ಪೊಲೀಸ್ ಇನ್ಸ್ ಪೆಕ್ಟರ್, ಡಿ.ಸಿ.ಐ.ಬಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರುರವರ ವಶಕ್ಕೆ ಒಪ್ಪಿ ಸಲಾಗಿದೆ.

ಮೇಲೆ ಹೇಳಿದ 11 ಪ್ಲಾಸ್ಟಿಕ್ ಡಬ್ಬಗಳನ್ನು ಗುರುತಿಸುತ್ತೇನೆ. ಅವುಗಳಲ್ಲಿ ಎ1 ರಿಂದ ಎ6 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಈಗಾಗಲೇ ಮೂಲ ಪ್ರಕರಣದಲ್ಲಿ ಮುದ್ದೆಮಾಲು 144 ರಿಂದ ಮುದ್ದೆಮಾಲು 149 ಮತ್ತು ಬಿ1 ರಿಂದ ಬಿ5 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಮುದ್ದೆಮಾಲು150 ರಿಂದ ಮುದ್ದೆಮಾಲು154 ಎಂದು ಗುರುತಿಸಲಾಗಿದೆ.

S. C. 34/2020 PW-45
Date: 04.04.2025

ಆ ಬಗ್ಗೆ ನಾನು ಮೇಲೆ ಹೇಳಿದ ಐದು ಬಾಂಬುಗಳನ್ನು ನಿಷ್ಕ್ರಿಯಗೊಳಿಸಿದ ಬಗ್ಗೆ ನೀಡಿದ ವರದಿಯ ಯಥಾಪ್ರತಿಯನ್ನು ಈಗ ಗುರುತಿಸುತ್ತೇನೆ. ಅದನ್ನು ಈಗ ನಿಶಾನೆ ಪಿ-65 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.65(ಎ)** ಗುರುತಿಸಲಾಯಿತು.

**ಪಾಟೀಸವಾಲುಃ 10ನೇ ಆರೋಪಿಯ ಪರ ಶ್ರೀ ಎಸ್.ಆರ್.ಎಫ್. ವಕೀಲರಿಂದಃ-**

ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.